**ದಿನಾಂಕ 21.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ನಾನು 5 ನೇ ತರಗತಿಯವೆರೆಗೆ ಓದಿರುತ್ತೇನೆ. ನನಗೆ ನಾಲ್ಕು ಜನ ಮಕ್ಕಳು. ನನ್ನ ಗಂಡ ಸಮೀ ಉಲ್ಲಾ ಖಾಯಿಲೆಯಲ್ಲಿರುತ್ತಾನೆ. ನನ್ನ ಕೊನೆಯ ಮಗ ಮೃತ ಪಟ್ಟಿರುತ್ತಾನೆ. ನನ್ನ ಮಗ ಉಮಾರ್ ಪಾರುಖ್ ರವರಿಗೆ ದ್ವಿಚಕ್ರ ವಾಹನ ಸೇರಿರುತ್ತದೆ. ನನ್ನ ಮಗನಿಗೆ ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಡಿಎಲ್ ಇಲ್ಲದೆ ಇದ್ದ ಕಾರಣ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಹೇಳಿರುವ ವಿಳಾಸದಲ್ಲಿ ಮೊದಲಿನಿಂದಲೂ ವಾಸವಾಗಿರುತ್ತೇವೆ. ಒಂದು ವೇಳೆ ನನ್ನ ಮಗ ಡಿಎಲ್ ಮಾಡಿಸಿದ್ದಲ್ಲಿ ನಮ್ಮ ವಿಳಾಸದಲ್ಲಿ ಬರುವ ಆರ್ ಟಿ ಓ ಕಚೇರಿಯಲ್ಲಿ ಮಾಡಿಸಿರುತ್ತಾರೆ ಎಂದರೆ ಸರಿ. ಈಗ ಡಿಎಲ್ ಪ್ರತಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುತ್ತದೆ. ನನ್ನ ಮಗನಿಗೆ ಡಿಎಲ್ ಇಲ್ಲದೆ ಇದ್ದ ಕಾರಣ ನನಗೆ ತೊಂದರೆ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ವಿ ವರದಿ ಪ್ರಕಾರ ಸ್ಯಯದ್ ಮೌಲಾ ಓಡಿಸುತ್ತಿದ್ದ ದ್ವಿಚಕ್ರ ವಾಹನದ ಮುಂಭಾಗ ಸಂಪೂರ್ಣ ಜಕಂ ಆಗಿರುತ್ತದೆ ಎಂದರೆ ಸರಿ. ಈಚರ್ ಟ್ರಕ್ ನ ಹಿಂಭಾಗದ ಬಲಗಡೆ ಜಕಂ ಆಗಿದೆ ಎಂದರೆ ಸರಿಯಲ್ಲ. ಸೈಯದ್ ಮೌಲಾ ಅತೀ ವೇಗ ಮತ್ತು ಅಜಾಗರುಕತೆಯಿಂದ ಓಡಿಸಿಕೊಂಡು ಮುಂದೆ ಹೋಗುತ್ತಿದ್ದ ವಾಹನದ ಹಿಂಬದಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸತ್ಯವನ್ನು ಹೇಳಿದರೆ ಪರಿಹಾರ ಸಿಗುವುದಿಲ್ಲ ಎಂದು ಹೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರೊಂದಿಗೆ ಶಾಮೀಲಾಗಿ ಲಾರಿ ಚಾಲಕನ ವಿರುದ್ದ ಸುಳ್ಳು ಆರೋಪವನ್ನು ಹೊರಿಸಿರುತ್ತೇವೆ ಎಂದರೆ ಸರಿಯಲ್ಲ. ಲಾರಿ ಚಾಲಕನ ಯಾವುದೇ ತಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ಸ್ಯಯದ್ ಮೌಲಾ ತಪ್ಪಿನಿಂದಲೇ ಅಪಘಾತವಾದ ಕಾರಣ ಪರಿಹಾರ ಪಡೆಯಲು ಅರ್ಹರಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ದೊಡ್ಡಬಳ್ಳಾಪುರದ ಅರವಿಂದ್ ಶಾಲೆಯಲ್ಲಿ 9 ನೇ ತರಗತಿ ಓದಿದ್ದ. ನನ್ನ ಮಗನಿಗೆ 20 ವರ್ಷ ವಯಸ್ಸಾಗಿತ್ತು. ನಿ.ಪಿ.9 ಬಿಸ್ಮಿಲ್ಲಾ ಚಿಕನ್ ಸೆಂಟರ್ ಮಾಲೀಕರು ನನಗೆ ಮೂರು ವರ್ಷದಿಂದ ಪರಿಚಯವಿರುತ್ತಾರೆ. ಸದರಿಯವರು ನನಗೆ ಸಂಬಂಧಿಕರಲ್ಲ. ನಿ.ಪಿ.9 ಅನ್ನು ನಾನು ಬರೆಸಿಕೊಂಡು ಬಂದಿರುತ್ತೇನೆ. ನಿ.ಪಿ.9 ಮಾಲೀಕರಿಂದ ಸಾಕ್ಷ್ಯ ನುಡಿಸಲು ತೊಂದರೆ ಇರುವುದಿಲ್ಲ. ನಾನು ನ್ಯಾಯಾಲಯದಲಿಲ ದಾಖಲೆಯನ್ನು ಹಾಜರುಪಡಿಸಲು ಬೇಕಾಗಿರುತ್ತದೆ ಎಂದು ಹೇಳಿ ಕೇಳಿ ತಂದಿರುತ್ತೇನೆ. ನಿ.ಪಿ.9 ಅನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಮಗನ ತಲೆಗೆ ಗಾಯಗಳಾಗಿದ್ದರಿಂದ ಮೃತ ಪಟ್ಟಿರುತ್ತಾನೆ ಎಂದರೆ ಸರಿ. ನನ್ನ ಮಗ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ದೂರನ್ನು ಅಕ್ರಂ ಪಾಷ ದೂರು ಕೊಟ್ಟಿರುತ್ತಾನೆ. ಅಕ್ರಂ ಪಾಷ ಅಪಘಾತದ ಸಮಯದಲ್ಲಿ ಇರಲಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಚಿಕನ್ ಸೆಂಟರ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ತಿಂಗಳಿಗೆ 22 ಸಾವಿರ ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 2, 3 ಮತ್ತು 6 ಖಂಡಿಕೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಅಂತ್ಯ ಸಂಸ್ಕಾರಕ್ಕೆ 60 ಸಾವಿರ ಖರ್ಚು ಮಾಡಿರುತ್ತೇನೆ ಎಂದರೆ

ಸರಿಯಲ್ಲ. ಅಪಘಾತಕ್ಕೆ ಪ್ರತ್ಯಕ್ಷ ಸಾಕ್ಷಿದಾರರು ಇರುವುದಿಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದ್ದೆ).

(ಓ.ಹೇ.ಕೇ.ಸ.ಇ.)

1 ನೇ ಹೆಚ್ಚುವರಿ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ